882 ಶ್ರೀ ನಾಗೇಂದ್ರ ಬಿ. (ಕೂಡ್ಲಿಗಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕಿಗೆ ಕಳೆದ ಎರಡು ವರ್ಷಗಳಿಂದ ಸರ್ಕಾರದಿಂದ ಮಂಜೂರಾಗಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಎಷ್ಟು (ವಿವರ ನೀಡುವುದು);

ಆ) ಕಳೆದ ಎರಡು ವರ್ಷಗಳಿಂದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ತೆಗೆದುಕೊಂಡ ಶಾಲಾ ಕಟ್ಟಡಗಳ ಸಂಖ್ಯೆ ಎಷ್ಟು ಹಾಗೂ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು (ವಿವರ ನೀಡುವುದು);

ಇ) ಪ್ರಸಕ್ತ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಮಂಜೂರು ಮಾಡುವುದು ಸರ್ಕಾರದ ಗಮನದಲ್ಲಿದೆಯೇ; ಇದ್ದಲ್ಲಿ, ಅದು ಯಾವ ಹಂತದಲ್ಲಿರುತ್ತದೆ (ವಿವರ ನೀಡುವುದು);

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕಿಗೆ 2007–08ನೇ ಸಾಲಿನಲ್ಲಿ 5 ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ 4 ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ. ವಿವರ ಕೆಳಗಿನಂತಿದೆ:–

ಸರ್ಕಾರಿ ಪ್ರಾಥಮಿಕ ಶಾಲೆಗಳು :–

1. ಸ.ಕಿ.ಪ್ರಾ.ಶಾಲೆ–ಕಾಲಾಮರ–ಆಶ್ರಯ ಕಾಲೋನಿ.
2. ಸ.ಕಿ.ಪ್ರಾ.ಶಾಲೆ–ದೂಪದಹಳ್ಳಿ–ಆಶ್ರಯ ಕಾಲೋನಿ.
3. ಸ.ಕಿ.ಪ್ರಾ.ಶಾಲೆ–ಕುರಿಹಟ್ಟಿ ಕ್ರಾಸ್
4. ಸ.ಕಿ.ಪ್ರಾ.ಶಾಲೆ–ಕೊಟ್ಟೂರು
5. ಸ.ಕಿ.ಪ್ರಾ.ಶಾಲೆ–ಹ್ಯಾಳ್ಯಾರೋಟ್.

ಸರ್ಕಾರಿ ಪ್ರೌಢ ಶಾಲೆಗಳು :–

1. ಸ.ಕಿ.ಪ್ರಾ.ಶಾಲೆ–ಕಂದಗಲ್ಲು.
2. ಸ.ಕಿ.ಪ್ರಾ.ಶಾಲೆ–ಹೊಸಹಳ್ಳಿ (ಬಾಲಕಿಯರು)
3. ಸ.ಕಿ.ಪ್ರಾ.ಶಾಲೆ–ಬಯಲುತುಂಬರಗುದ್ದಿ
4. ಸ.ಕಿ.ಪ್ರಾ.ಶಾಲೆ–ತಾಯಕ್ಕನಹಳ್ಳಿ

ಆ) ಕಳೆದ 2 ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿಗೆ ಬಿಡುಗಡೆಯಾದ ವಿವರ ಈ ಕೆಳಕಂಡಂತೆ ಇರುತ್ತದೆ.

ರೂ.ಲಕ್ಷಗಳಲ್ಲಿ

ಹಂತ	2007–08		2008–09	
	ಕೊಠಡಿ	ಮೊತ್ತ	ಕೊಠಡಿ	ಮೊತ್ತ
ಪ್ರಾಥಮಿಕ	5	32.50	–	–
ಪ್ರೌಢ				
ರಾಜ್ಯವಲಯ	–	–	–	–
ಆರ್‌ಐಡಿಎಫ್	13	59.00	–	–

ಇ) ಇದೆ.

ಸರ್ವ ಶಿಕ್ಷಣ ಅಭಿಯಾನದಡಿ 2009–10ನೇ ಸಾಲಿನಲ್ಲಿ ರಾಜ್ಯದಲ್ಲಿ 317 ಹೊಸ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗಿರುತ್ತದೆ.

ಹಿಂದಿನ ವರ್ಷಗಳಲ್ಲಿ ಪ್ರಾರಂಭಿಸಲಾದ ಹೊಸ ಸರ್ಕಾರಿ ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ ನಂತರ ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

1135 ಶ್ರೀ ಗೋಪಾಲಕೃಷ್ಣ ಎನ್. ವೈ. (ಮೊಳಕಾಲ್ಮೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ಕ್ಷೇತ್ರದ ವ್ಯಾಪ್ತಿಯಡಿಯಲ್ಲಿ ಈವರೆವಿಗೂ ಮಂಜೂರಾಗಿರುವ ಸರ್ಕಾರಿ ಪ್ರೌಢಶಾಲೆಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಕ್ಷೇತ್ರದ ವ್ಯಾಪ್ತಿಗೆ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಮೊಳಕಾಲ್ಮೂರು ತಾಲ್ಲೂಕಿನ ಕೆಳಕಂಡ ಸ್ಥಳಗಳಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ.

1. ಸರ್ಕಾರಿ ಪ್ರೌಢಶಾಲೆ– ನಾಗಸಮುದ್ರ, ತಾಲ್ಲೂಕು ಮೊಳಕಾಲ್ಮೂರು